**ದಿನಾಂಕ 16.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ– ಶ್ರೀ ಎನ್.ಎಸ್. ಮೇಲ್ಮನವಿದಾರರ ಪರ ವಕೀಲರಿಂದಃ–**

ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ಅಲಭ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

**ಈ ಮೂಲಕ ನನ್ನ ಸಾಕ್ಷ್ಯವನ್ನು ಅಂತ್ಯಗೊಳಿಸಿದ್ದು, ಮೇಲ್ಮನವಿಯನ್ನು ಪುರಸ್ಕರಿಸಲು ಪ್ರಾರ್ಥನೆ.**

**ಪಾಟೀ ಸವಾಲು : ಶ್ರೀ ಎಂ.ಡಿ. ವಕೀಲರಿಂದ ಎದುರುದಾರರ ಪರ** :

ಮೂಲ ದಾವಾ ಸಂಖ್ಯೆ 34/2011 ರಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ನಾನು ನೀಡಿದ ಸಾಕ್ಷ್ಯದಲ್ಲಿ ಗೋಪಾಲ್ ರವರ ಮರಣ ಸಮರ್ಥನಾ ಪತ್ರವನ್ನು ನಿಡಿ.2 ಎಂದು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಈಗ ಹಾಜರುಪಡಿಸಿರುವ ನಿಪಿ.1 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಮೂಲ ದಾವಾದಲ್ಲಿ ತೀರ್ಪು ಬಂದ ನಂತರ ಈ ಮೇಲ್ಮನವಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯ ದಿನಾಂಕದ ವೇಳೆಗೆ ನಿಪಿ.1 ನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ದುರುದ್ದೇಶದಿಂದ ನಿಪಿ.1 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು) **ಹಿರಿಯ ದಿವಾಣಿ ನ್ಯಾಯಾಧೀಶರು,**
ಓ ಹೇ ಕೇ ಸರಿ ಇದೆ **ತಿ.ನರಸೀಪುರ.**

**<u>ದಿನಾಂಕ 16.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ– ಶ್ರೀ ಎನ್.ಎಸ್. ಮೇಲ್ಮನವಿದಾರರ ಪರ ವಕೀಲರಿಂದಃ–</u>**

ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ಮೂಲ ದಾವಾ ಸಂಖ್ಯೆ 34/2011 ರಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ನಿಶಾನೆಯಾಗಿ ಗುರುತಿಸಿರುವ ನಿಪಿ.3 ಮತ್ತು 4 ರಲ್ಲಿ ನನ್ನ ತಂದೆಯಾದ ಟಿ.ಸಿ. ದೊಡ್ಡವೀರ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತೇನೆ. ಅವುಗಳು ಈಗಾಗಲೇ ನಿಪಿ.3(ಎ) ಮತ್ತು 4(ಎ) ಎಂದು ಗುರುತಿಸಲ್ಪಟ್ಟಿವೆ.

**<u>ಪಾಟೀ ಸವಾಲು : ಶ್ರೀ ಎಂ.ಡಿ. ವಕೀಲರಿಂದ ಎದುರುದಾರರ ಪರ</u>** :

ನನ್ನ ತಂದೆರವರು ಟಿ.ಸಿ. ದೊಡ್ಡವೀರ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆಗೆ ನಾನು ಸೇರಿ ಮೂರು ಜನ ಮಕ್ಕಳು. ನನ್ನ ಸಹೋದರರ ಹೆಸರು ಟಿ. ಸಿ. ಮರಿಸ್ವಾಮಿನಾಯಕ ಮತ್ತು ಟಿ.ಸಿ. ಚಿಕ್ಕಸ್ವಾಮಿನಾಯಕ ಆಗಿರುತ್ತವೆ.

ನನ್ನ ತಂದೆ ಶಿಕ್ಷಕರಾಗಿದ್ದರು. ಅವರು ಪತ್ರಗಳನ್ನು ಬರೆಯುತ್ತಿದ್ದರು. ಅವರು ಆ ಕುರಿತು ಪರವಾನಗಿಯನ್ನು ಪಡೆದಿರಲಿಲ್ಲ. ನನ್ನ ತಂದೆ ಬರೆದಿದ್ದ ಪತ್ರಗಳು ನೊಂದಣಿಯಾಗಿದ್ದು, ಅವುಗಳನ್ನು ನೋಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಈ ಮೇಲೆ ಹೇಳಿದ ನಿಪಿ.3 ಮತ್ತು 4 ರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಆ ಪತ್ರಗಳನ್ನು ಯಾರು ಮತ್ತು ಯಾವ ಸಂದರ್ಭದಲ್ಲಿ ಬರೆಸಿದ್ದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರಲಿಲ್ಲ. ನಾನು ಸಾಕ್ಷ್ಯವನ್ನು ನುಡಿಯುವಂತೆ ಮೇಲ್ಮನವಿದಾರರು ನನಗೆ ಹೇಳಿರುತ್ತಾರೆ. ಅವರ ಮಾಹಿತಿಯ ಪ್ರಕಾರ ನನ್ನ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಿದ್ದಪಡಿಸಲಾಗಿದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**